ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ಕನಿಷ್ಟಪಕ್ಷ ಈಗಲಾದರೂ ಕೂಡ ಸರ್ಕಾರ ಗಾಢವಾದ ನಿದ್ದೆಯಿಂದ ಎಚ್ಚೆತ್ತು ಈ ಬರ ಪರಿಹಾರ ವಿಚಾರದಲ್ಲಿ ಏನು ವೈಫಲ್ಯತೆಗಳಿವೆ, ನಾವು ಕೊಟ್ಟಿರತಕ್ಕಂಥ ಸಲಹೆಗಳನ್ನು ತೆಗೆದುಕೊಂಡು, ಬೇರೆ ಎಲ್ಲಾ ಕೆಲಸಗಳಿಗೂ ನೀವು ಕೊಡುತ್ತಾ ಇರತಕ್ಕಂಥ ಈ ಐ.ಟಿ. ಬಿ.ಟಿ ಗಳಿಗೆ ಮಹತ್ವಗಳನ್ನು ನಿಲ್ಲಿಸಿ, ಇದಕ್ಕೆ ದುಡ್ಡಿಲ್ಲ, ದುಡ್ಡಿಲ್ಲ ಎಂದು ಹೇಳುತ್ತಾರೆ ಮಾನ್ಯ ಉಪಾಧ್ಯಕ್ಷರೆ, ನಾನು ಬೇರೆ ವಿಚಾರದಲ್ಲಿ ಮಾತನಾಡುತ್ತೇನೆ ಮುಂದೆ. ರಿಸೋರ್ಸ್ ಮೊಬಲೈಸೇಶನ್ ವಿಚಾರದಲ್ಲಿ ಬೆಂಗಳೂರು ಸಿಟಿಯಲ್ಲಿ ಐ.ಟಿ ಕಂಪನಿಗಳಿಗೆ ಎಷ್ಟೊಂದು ಡಿಸೋಟಿಫೈ ಆಗಿದೆ, ಯಾವ ಘನ ಉದ್ದೇಶಕ್ಕೊಸ್ಕರ ಡಿಸೋಟಿಫೈ ಆಗಿದೆ, ಸರ್ಕಾರಕ್ಕೆ ಬರತಕ್ಕಂಥ ದುಡ್ಡು ಬೇರೆಯವರಿಗೆ ಹೇಗೆ ಹೋಗಿದೆ ಎನ್ನುವುದನ್ನೆಲ್ಲಾ ನಾನು ತಿಳಿಸುತ್ತೇನೆ. ಆದರೆ ಈಗ ಸರ್ಕಾರ ತಕ್ಷಣ ಬರ ಪರಿಹಾರ ಕೆಲಸಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಹೇಳಿ ನಾನು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಇಷ್ಟು ಹೊತ್ತು ಮಾತನಾಡುವುದಕ್ಕೆ ನನಗೆ ಸಮಯ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳು.

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳ್ಳಿಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 02 ನಿಮಿಷಕ್ಕೆ ಮುಂಡೂಡಲ್ಪಟ್ಟು ಮತ್ತೆ ದಿನಾಂಕ 5-3-2003 ರಂದು ಬೆಳ್ಳಿಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.

ಅನುಬಂಧ-1

ಮುಲ್ಕಿ ಪುರಸಭೆಗೆ ಮಂಜೂರಾಗಿರುವ ನೀರು ಸರಬರಾಜು ಯೋಜನೆ

106(67) ಶ್ರೀ ಅಭಯಚಂದ್ರ .ಕೆ. (ಮೂಡಬಿದ್ರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಮುಲ್ಕಿ ಪುರಸಭೆಯ ಕುಡಿಯುವ ನೀರು ಸರಬರಾಜು ಯೋಜನೆಗೆ ಸರ್ಕಾರವು 4 ಕೋಟಿ ಹಣವನ್ನು ಮಂಜೂರು ಮಾಡಲಾಗಿದ್ದರೂ ಸಹ ಇನ್ನೂ ಕೆಲಸ ಪ್ರಾರಂಭಗೊಳ್ಳದಿರಲು ಕಾರಣವೇನು?

ಆ. ಪ್ರಸ್ತುತ ಸದರಿ ಕಾಮಗಾರಿ ಯಾವ ಹಂತ ತಲುಪಿದೆ?

ಶ್ರೀ ಎಸ್. ಎಂ .ಕೃಷ್ಣ (ಮುಖ್ಯಮಂತ್ರಿಗಳು)

ಅ. ಮುಲ್ಕಿ ಪಟ್ಟಣಕ್ಕೆ ಹಾಗೂ ಮಾರ್ಗ ಮಧ್ಯದ 6 ಹಳ್ಳಿಗಳಿಗೆ ಸೇರಿ ನೀರು ಸರಬರಾಜು ಯೋಜನೆಯೊಂದನ್ನು ರೂ 412.36 ಲಕ್ಷಗಳಿಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ: 16.1.2002 ರಂದು ನೀಡಿದೆ. ಸದರಿ ಆದೇಶದ ಅನ್ವಯ ಹಳ್ಳಿಯ ವಂತಿಗೆ ಹಣವಾದ ರೂ. 217.94 ಲಕ್ಷಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೆಲಸ ಪ್ರಾರಂಭವಾಗುವ ಮುನ್ನವೇ ಭರಿಸಬೇಕಾಗಿದ್ದು. ಇಲ್ಲಿಯವರೆಗೆ ಮಂಡಳಿಗೆ ಹಣ ಸಂದಾಯ ಮಾಡಿರುವುದಿಲ್ಲ. ಆದರೂ ಸಹ ಈ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು. ಗುತ್ತಿಗೆದಾರರನ್ನು ನೇಮಿಸಲಾಗಿದೆ.

ಆ. ಸದರಿ ಯೋಜನೆಗೆ ಪ್ಯಾಕೇಜ್ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಸದ್ಯದಲ್ಲೇ ಗುತ್ತಿಗೆ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.